ESI.A.No.22/2019

AW-1,

ದಿನಾಂಕಃ 18-12-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ. SWK ವಕೀಲರಿಂದ

ನಾನು ಅರ್ಜಿದಾರ ಸಂಸ್ಥೆಯಲ್ಲಿ 2014 ರಿಂದ ಪ್ರೊಪ್ರೇಟರ್ ಆಗಿರುತ್ತೇನೆ. ನಾನಾಗಿಯೇ ಇ ಎಸ್ ಐ ಕೋಡನ್ನು ಜನರೇಟ್ ಮಾಡಿಕೊಂಡಿದ್ದೆ ಎಂದರೆ ನಿಜ. ಆ ರೀತಿ ಕೋಡ್ ಜನರೇಟ್ ಮಾಡಬೇಕಾದರೆ 151 ಜನ ಕಾರ್ಮಿಕರು ಇದ್ದಾರೆ ಎಂದು ಹೇಳಿಕೊಂಡಿದ್ದೆ ಎಂದರೆ ಸರಿಯಲ್ಲ. ಆರಂಭದಲ್ಲಿ 18 ಜನ ಕಾರ್ಮಿಕರು ಇದ್ದರು. ಆ ಅವಧಿಯ ಅಟೆಂಡೆನ್ಸ ಮತ್ತು ಪೇಮೆಂಟ್ ರಿಜಿಸ್ಟರನ್ನು ನಾನು ಹಾಜರುಪಡಿಸಿಲ್ಲ. 2015 ರಲ್ಲಿ ನಮ್ಮ ಸಂಸ್ಥೆ ಮುಚ್ಚಲ್ಪಟ್ಟಿತ್ತು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಎದುರುದಾರರ ಸಂಸ್ಥೆಗೆ ನಮ್ಮ ಸಂಸ್ಥೆಯನ್ನು ಮುಚ್ಚಿದ ಬಗ್ಗೆ ನಾನು ಮಾಹಿತಿ ನೀಡಿಲ್ಲ. ಎದುರುದಾರರ ಸಂಸ್ಥೆಯವರು ಏಪ್ರಿಲ್ 2015 ರಿಂದ ಜೂನ್ 2016 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ರೂ 12,14,607-00 ಗಳನ್ನು ಪಾವತಿಸಬೇಕೆಪಿಂದು ನೋಟೀಸ್ ಕೊಟ್ಟಿದ್ದಾರೆ ಎಂದರೆ ನಿಜ. ಅದೇರೀತಿಯಲ್ಲಿ ದಿಃ29-8-2016 ರಂದು ನಾನು ವೈಯಕ್ತಿಕ ಸುನಾವಣೆಗೆ ಹಾಜರಾಗಬೇಕೆಂದು ನನಗೆ ತಿಳುವಳಿಕೆ ಪತ್ರವನ್ನು ನೀಡಿದ್ದರು ಎಂದರೆ ನಿಜ. ಆ ನೋಟೀಸಿನಲ್ಲಿ ನನಗೆ ಲೆಡ್ಜರ್ , ಕ್ಯಾಷ್ ಬುಕ್ , ಬ್ಯಾಲೆನ್ಸ ಶೀಟ್, ಪ್ರಾಫಿಟ್ ಅಂಡ್ ಲಾಸ್ ಅಕೌಂಟ್ ಮತ್ತು ಬಿಲ್ಸ್ ಹಾಜರುಮಾಡುವಂತೆ ಎಂದು ತಿಳಿಸಿದ್ದರು ಎಂದರೆ ನಿಜ. ಆ ದಿನ ಪರ್ಸನಲ್ ಹೀರಿಂಗ್ಗೆ ಹಾಜರಾಗಿದ್ದೆ. ದಿನಾಂಕಃ8-11-2016 ರಂದು ನನಗೆ ಇನ್ನೊಂದು ಅವಕಾಶವನ್ನು ನೀಡಿ ಸುನಾವಣೆಗೆ ಕರೆದಿದ್ದರು ಎಂದರೆ ನಿಜ. ಆ ದಿನ ನಾನು ಹಾಜರಾಗಲಿಲ್ಲ ಎಂಬುದು ನಿಜ. ನಾನು 151 ಜನ ಕಾರ್ಮಿಕರು ಇದ್ದಾರೆ ಎಂದು ಎದುರುದಾರ ಸಂಸ್ಥೆಗೆ ತಿಳಿಸಿದ್ದರಿಂದ ಅವರು ಈ ಮೇಲಿನ ನೋಟೀಸನ್ನು ನೀಡಿದ್ದರು ಎಂದರೆ ಸರಿಯಲ್ಲ. ದಿನಾಂಕಃ16-3-2019 ರಲ್ಲಿ ಈ ಕೇಸನ್ನು ಹಾಕಿದ್ದೇನೆ ಎಂದರೆ ನಿಜ. ಈ ಕೇಸು ಹಾಕುವ 2 ದಿನ ಪೂರ್ವದಲ್ಲಿ ನಾನು ಇ ಎಸ್ ಐ ವಂತಿಗೆಯನ್ನು ಪಾವತಿಸಿ ನಿಶಾನೆ ಎ-2 ನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಆ ಸಮಯದಲ್ಲಿ ಕಸ ಗುಡಿಸಲು ಒಬ್ಬ ಕಾರ್ಮಿಕ ಬರುತ್ತಿದ್ದರು ಆದ್ದರಿಂದ ರೂ.651-00 ಗಳನ್ನು ವಂತಿಗೆಯನ್ನು ಪಾವತಿ ಮಾಡಿದ್ದೇನೆ. ನಿಶಾನೆ ಎ-3 ರಲ್ಲಿ ಕಾರ್ಮಿಕರ ಸಹಿ ಇಲ್ಲ ಎಂದರೆ ನಿಜ ಆದರೆ ಮೂಲ ದಾಖಲೆಯಲ್ಲಿರುತ್ತದೆ. ಮೂಲ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ ಎಂದರೆ ನಿಜ. ಸುಳ್ಳು ಕೇಸು ಹಾಕುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಕೇಳಿರುವ ರೂ.12,14,607-00 ಗಳನ್ನು ಪಾವತಿಸಲು ನಾನು ಬದ್ದನಾಗಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನಿಶಾನೆ ಎ-4 ದಾಖಲೆಯಲ್ಲಿ ಕಾಣುವ ಕಾರ್ಮಿಕರ ಇ

ESI.A.No.22/2019

AW-1,

ಎಸ್ ಐ ವಂತಿಗೆಯನ್ನು ಪಾವತಿ ಮಾಡಿದ್ದೇನೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.